(ಆ) 2011ರ ಜನಗಣತಿ ಕಾರ್ಯ ಮುಗಿದಿರುತ್ತದೆ. ಆದರೆ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಜನಗಣತಿಯ ಅಂಕಿ-ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ. ಅಧಿಕೃತವಾಗಿ ಪ್ರಕಟಿಸಿದ ನಂತರ ಕಿತ್ತೂರು ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಪರಿವರ್ತಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3,9 ಮತ್ತು 349ರನ್ವಯ ನಿಯಮಾನುಸಾರ ಪರಿಶೀಲಿಸಲಾಗುವುದು.

2001-22ನೇ C.R.F. ಯೋಜನೆಯಲ್ಲಿ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣ

ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ):-

301 (234) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರದಿಂದ 2009-10 ಮತ್ತು 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಿ.ಆರ್.ಎಫ್. ನಿಧಿಯಿಂದ ರಾಜ್ಯಕ್ಕೆ ಮಂಜೂರಾಗಿರುವ ಒಟ್ಟು ಹಣ ಎಷ್ಟು;

(ಆ) ಸಿ.ಆರ್.ಎಫ್. ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳು ಎಷ್ಟು (ಜಿಲ್ಲಾವಾರು ವರದಿ ನೀಡುವುದು);

(ಇ) ಈ ಪೈಕಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಗುತ್ತಿಗೆದಾರರಿಗೆ ಹಣ ಪಾವತಿಯಾಗದೇ ಮುಂದಿನ ಅಭಿವೃದ್ಧಿಯ ಪ್ರಗತಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಚಿಕ್ಕಬಳ್ಳಾಪುರ ಜಿಲ್ಲೆಗೆ ಹಣ ಯಾವಾಗ ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):-

(ಅ) ಕೇಂದ್ರ ಸರ್ಕಾರದಿಂದ 2009-10 ಮತ್ತು 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಿ.ಆರ್.ಎಫ್. ನಿಧಿಯಿಂದ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ;

ಕ್ರ.ಸಂ.	ವರ್ಷ		ಬಿಡುಗಡೆಯಾದ ಅನುದಾನ ಕೋಟಿ ರೂ.ಗಳಲ್ಲಿ
1.	2009–10	...	120.30
2.	2010–11	...	96.01

(ಆ) ಸಿ.ಆರ್.ಎಫ್. ಯೋಜನೆಯಡಿಯಲ್ಲಿ 2009–10ನೇ ಸಾಲಿನಲ್ಲಿ 6 ಕಾಮಗಾರಿಗಳು ರೂ. 156.88 ಕೋಟಿ ಹಾಗೂ 2010–11ನೇ ಸಾಲಿನಲ್ಲಿ 14 ಕಾಮಗಾರಿಗಳು ರೂ. 69.64 ಕೋಟಿಗಳ ಮೊತ್ತ ಮಂಜೂರಾಗಿರುತ್ತದೆ. ಜಿಲ್ಲಾವಾರು ವಿವರಗಳು ಕೆಳಗಿನಂತೆ ಇರುತ್ತದೆ.

2009–10:–

ಕ್ರ.ಸಂ.	ಜಿಲ್ಲೆ	ಕಾಮಗಾರಿಗಳ ಸಂಖ್ಯೆ	ಮಂಜೂರಾದ ಮೊತ್ತ ಕೋಟಿ ರೂ.ಗಳಲ್ಲಿ
1.	ಬಾಗಲಕೋಟೆ	1	56.83
2.	ಬೆಂಗಳೂರು (ಗ್ರಾ)	3	25.76
3.	ಚಿಕ್ಕಬಳ್ಳಾಪುರ	1	3.29
4.	ಗುಲ್ಬರ್ಗಾ	1	71.00
	ಒಟ್ಟು	6	156.88

2010–11:–

ಕ್ರ.ಸಂ.	ಜಿಲ್ಲೆ	ಕಾಮಗಾರಿಗಳ ಸಂಖ್ಯೆ	ಮಂಜೂರಾದ ಮೊತ್ತ ಕೋಟಿ ರೂ.ಗಳಲ್ಲಿ
1.	ಬೀದರ್	1	4.00
2.	ಚಾಮರಾಜನಗರ	1	5.00
3.	ಚಿಕ್ಕಬಳ್ಳಾಪರ	4	17.92
4.	ಧಾರವಾಡ	1	5.00
5.	ಹಾಸನ	2	9.00
6.	ಮೈಸೂರು	4	25.72
7.	ಉತ್ತರ ಕನ್ನಡ	1	3.00
	ಒಟ್ಟು	14	69.64

(ಇ) 2009–10ನೇ ಸಾಲಿನಲ್ಲಿ ಮಂಜೂರಾದ 6 ಕಾಮಗಾರಿಗಳ ಪೈಕಿ ಒಂದು ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಉಳಿದ 5 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ ಕಾಮಗಾರಿಯ ಪ್ರಗತಿ ಅನುಸಾರವಾಗಿ ಅನುದಾನ ಬಿಡುಗಡೆ ಮಾಡಲಾಗುವುದು. 2010–11ನೇ ಸಾಲಿನಲ್ಲಿ 14 ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಗದಿ ಪಡಿಸಬೇಕಾಗಿರುತ್ತದೆ.

ರಾಜ್ಯದಲ್ಲಿ ಕೆಶಿಪ್ ರಸ್ತೆಗಳ ನಿರ್ಮಾಣ

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):–

302 (579) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೆಶಿಪ್ ರಸ್ತೆಗಳ ನಿರ್ಮಾಣದ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕೆಶಿಪ್ ರಸ್ತೆಗಳ ನಿರ್ಮಾಣದ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ನೀಡುವಾಗ ಸರ್ಕಾರ ಅನುಸರಿಸಿರುವ ಮಾನದಂಡಗಳೇನು;

(ಇ) ಸಿಂಧನೂರು–ರಾಯಚೂರು ರಸ್ತೆಯನ್ನು ಕೆಶಿಪ್ ರಸ್ತೆಗಳ ನಿರ್ವಹಣೆಯನ್ನು ಈ ಯೋಜನೆಯಿಂದ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಮೇಲ್ಕಂಡ ರಸ್ತೆಯ ನಿರ್ವಹಣೆಯನ್ನು ಈ ಯೋಜನೆಯಿಂದ ಕೈಬಿಡಲು ಕಾರಣಗಳೇನು;

(ಉ) ಇದರಿಂದ ಸ್ಥಳೀಯ ನಾಗರೀಕರಿಗೆ ಹಾಗೂ ಸಾರ್ವಜನಿಕ ವಾಹನಗಳ ಸವಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಹಾಗಿದ್ದಲ್ಲಿ, ಸಿಂಧನೂರು–ರಾಯಚೂರು ರಸ್ತೆಯನ್ನು ಕೆಶಿಪ್ ರಸ್ತೆಗಳ ನಿರ್ವಹಣೆಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):–

(ಅ) ಕೆಶಿಪ್–1ರ ಅಡಿಯಲ್ಲಿ ಅಭಿವೃದ್ಧಿ ಪಡಿಸಿರುವ ರಸ್ತೆಗಳ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದಲೇ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

(ಆ) ಉದ್ಭವಿಸುವುದಿಲ್ಲ

(ಇ) ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ

(ಈ) ಉದ್ಭವಿಸುವುದಿಲ್ಲ